# ಎನ್‌ಐಟಿಕೆಯಲ್ಲಿ ಸಮ್ಮೇಳನ



**ಎನ್‌ಐಟಿಕೆ ಸಿವಿಲ್ ಇಂಜಿನಿಯರಿಂಗ್ ವಿಭಾಗ ವತಿಯಿಂದ ಗುರುವಾರ ಸುಸ್ಥಿರ ಮೂಲಸೌಕರ್ಯ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ನಡೆಯಿತು. ಜಿ20 ಸಿ20 ಡಬ್ಲ್ಯೂಜಿ ಅಂತಾರಾಷ್ಟ್ರೀಯ ಸಂಯೋಜಕ ಪ್ರೊ.ಎನ್.ವಿನೋದ್ ಚಂದ್ರ ಮೆನನ್, ಸಿಂಗಾಪುರದ ರಾಷ್ಟ್ರೀಯ ವಿಶ್ವವಿದ್ಯಾಲಯದ ಅಸೋಸಿಯೇಟ್ ಪ್ರೊಫೆಸರ್ ಪ್ರೊ. ಡಾರೆನ್ ಚಿಯಾನ್ ಸಿಯಾವು ಚೆನ್ ಮತ್ತಿತರರು ಇದ್ದರು.**

**ಸುರತ್ಕಲ್:** ನಮ್ಮ ಕಟ್ಟಡಗಳ ಬಾಳಿಕೆ ಚೆನ್ನಾಗಿಲ್ಲ. ವಿಶೇಷವಾಗಿ ಸೇತುವೆಗಳು ಮತ್ತು ಮೇಲ್ಸೇತುವೆಗಳಿಗೆ ವಿಪತ್ತುಗಳಿಂದ ಹಾನಿ ಹೆಚ್ಚು. ಆದ್ದರಿಂದ, ಇಂಜಿನಿಯರ್‌ಗಳು ಸುಸ್ಥಿರತೆ ಸಂಬಂಧಿ ಅಭ್ಯಾಸಗಳನ್ನು ಜಾರಿಗೆ ತರಬೇಕು ಎಂದು ಸುಸ್ಥಿರ ಮತ್ತು ಸ್ಥಿತಿಸ್ಥಾಪಕ ಸಮುದಾಯಗಳ ಕುರಿತ ಜಿ20 ಸಿ20 ಡಬ್ಲ್ಯೂಜಿ ಅಂತಾರಾಷ್ಟ್ರೀಯ ಸಂಯೋಜಕ ಪ್ರೊ.ಎನ್. ವಿನೋದ್ ಚಂದ್ರ ಮೆನನ್ ಹೇಳಿದರು.

ಎನ್‌ಐಟಿಕೆ ಸಿವಿಲ್ ಇಂಜಿನಿಯರಿಂಗ್ ವಿಭಾಗ ವತಿಯಿಂದ ಗುರುವಾರ ಆಯೋಜಿಸಿದ್ದ ಸುಸ್ಥಿರ ಮೂಲಸೌಕರ್ಯ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಜಿ 20 ಮತ್ತು ಸಿ 20 ಭಾಗವಾಗಿ ಈ ಅಂತಾರಾಷ್ಟ್ರೀಯ ಸಮ್ಮೇಳನ ಮಹತ್ವದ್ದಾಗಿದೆ. ಈ ಸಮ್ಮೇಳನದ ಶಿಫಾರಸುಗಳನ್ನು ದೆಹಲಿಯಲ್ಲಿ ನಡೆಯುವ ಜಿ 20 ಶೃಂಗಸಭೆಯಲ್ಲಿ ಭಾರತ ಸರ್ಕಾರದ ಮುಖ್ಯಸ್ಥರಿಗೆ ಮತ್ತು ಸಿ20 (ಸಿವಿಲ್ 20)ಗೆ ಪ್ರಸ್ತುತಪಡಿಸಲಾಗುವುದು ಎಂದರು.

ಸಿಂಗಾಪುರದ ರಾಷ್ಟ್ರೀಯ ವಿಶ್ವವಿದ್ಯಾಲಯದ ಅಸೋಸಿಯೇಟ್ ಪ್ರೊಫೆಸರ್ ಪ್ರೊ.ಡಾರೆನ್ ಚಿಯಾನ್ ಸಿಯಾವು ಚೆನ್ ಅತಿಥಿಯಾಗಿದ್ದರು. ಎನ್‌ಐಟಿಕೆ ಸುರತ್ಕಲ್ ನಿರ್ದೇಶಕ (ಹೆಚ್ಚುವರಿ ಉಸ್ತುವಾರಿ) ಪ್ರೊ.ಪ್ರಸಾದ್ ಕೃಷ್ಣ ಮುಖ್ಯ ಪೋಷಕರಾಗಿದ್ದರು. ಸಿವಿಲ್ ಎಂಜಿನಿಯರಿಂಗ್ ವಿಭಾಗದ ಎಚ್‌ಒಡಿ ಪ್ರೊ.ಬಿ.ಆರ್.ಜಯಲಕ್ಷ್ಮಿ ಪೋಷಕರಾಗಿದ್ದರು. ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರೊ.ಎ.ಯು.ರವಿಶಂಕರ್ ಮತ್ತು ಪ್ರೊ. ಕೆ.ಸ್ವಾಮಿನಾಥನ್ ಅವರನ್ನು ಸನ್ಮಾನಿಸಲಾಯಿತು.

vijayavani, Date:21/04/23 p,no- 05